**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**Spl.C.181/2024**

ದಿನಾಂಕ 13.08.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 4 ಪ್ರಾಸಾ -2

| | | |
|---|---|---|
| ಹೆಸರು | ಃ | ಚಂದ್ರ |
| ತಂದೆಯ ಹೆಸರು | ಃ | ಸಿದ್ದೇಗೌಡ |
| ವಯಸ್ಸು | ಃ | 54 ವರ್ಷ |
| ಉದ್ಯೋಗ | ಃ | ರೇಷ್ಮೆ ಸಾಕಾಣಿಕೆ |
| ವಾಸಸ್ಥಳ | ಃ | ಕೋಟೆಕೊಪ್ಪ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಪ್ರಾಸಾ 1 ರ ಪರಿಚಯ ನನಗೆ ಇಲ್ಲ. ಪ್ರಾಸಾ 1 ಯಾವ ಜಾತಿಗೆ ಸೇರಿದವರು ಎಂದು ನನಗೆ ಗೊತ್ತಿಲ್ಲ. ಆದರೆ ಶೆಡ್ಯೂಲ್ ಎಂದು ಹೇಳುತ್ತಾರೆ. ಚಾಸಾ 2 ಚಂದ್ರನಾಯ್ಕ ಮತ್ತು ಚಾಸಾ 3 ಅನಿಲ್ ಕುಮಾರ್ ನನಗೆ ಗೊತ್ತಿಲ್ಲ. ಚಾಸಾ 5 ಮುದ್ದೇಗೌಡ, ಚಾಸಾ 6 ಗಣೇಶ ಮತ್ತು ಚಾಸಾ 7 ರಮೇಶ ನನಗೆ ಗೊತ್ತು. ನ್ಯಾಯಾಲಯದ ಮುಂದಿರುವ 1, 2, 4 ಮತ್ತು 5ನೇ ಆರೋಪಿಗಳು ನನಗೆ ಗೊತ್ತು, ಅವರು ನಮ್ಮ ಊರಿನ ಮೇಲ್ಭಾಗದಲ್ಲಿ ವಾಸ ಮಾಡುತ್ತಾರೆ. ಅವರು ಗೌಡ ಜಾತಿಗೆ ಸೇರಿದವರಾಗಿರುತ್ತಾರೆ.

**2.** ಪ್ರಾಸಾ 1 ರ ಜೊತೆ ಯಾರು ಜಗಳವಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಗಲಾಟೆ ನೋಡಿರುವುದಿಲ್ಲ. ನಾನು ಯಾವುದೇ ಜಗಳ ಬಿಡಿಸಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ವಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

**<u>ವಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

**3.** ನನಗೆ ಪ್ರಾಸಾ 1 ರವರು ಪರಿಚಯವಿದ್ದು, ಆತ ದಿನಾಂಕ 05.10.2024 ರಂದು ಸಂಜೆ 5.30 ರ ಸಮಯದಲ್ಲಿ ನಮ್ಮ ಗ್ರಾಮದ ಚಿಕ್ಕೋನು ಅವರ ಮನೆಯ ಮುಂಭಾಗದ ರಸ್ತೆಯಲ್ಲಿ ಕಾರಿನಲ್ಲಿ ಬರುತ್ತಿದ್ದಾಗ ನ್ಯಾಯಾಲಯದ ಮುಂದಿರುವ ಆರೋಪಿಗಳು ಅವರಿಗೆ ಜಾತಿ ನಿಂದನೆ ಮಾಡಿ ಜಗಳವಾಡಿದಾಗ ನಾನು ಜಗಳ ಬಿಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ "ದಿನಾಂಕ 05.10.2024 ರಂದು ................................................. ನೋಡಿದರೆ ಗುರುತಿಸುತ್ತೇನೆ" ಎಂದು ಈಗ ಓದಿ ಹೇಳಿರುವಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ ಸದರಿ ಹೇಳಿಕೆಯನ್ನು ನಿಶಾನೆ ಪಿ 5 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿಗಳು ನನ್ನ ಪರಿಚಯಸ್ಥರಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ವಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ.ಪಿಎಂ, ವಕೀಲರಿಂದಃ ಏನೂ ಇಲ್ಲವೆಂದು ತಿಳಿಸಿರುತ್ತಾರೆ.</u>**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಎಂ.ಪಂಚಾಕ್ಷರಿ)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**